


**ಗುಂಡ:** ವಾರ್ಷಿಕ ರಜೆಗಳಲ್ಲಿ ನಾನು ಯೋಜಿಸುತ್ತಿದ್ದ ಕೌಟುಂಬಿಕ ವಿದೇಶ ಪ್ರವಾಸವನ್ನು ಇದೇ ಮೊದಲ ಬಾರಿ ಕೋವಿಡ್ ಕಾರಣದಿಂದಾಗಿ ರದ್ದು ಗೊಳಿಸಬೇಕಾಯಿತು.

**ಪುಂಡ:** ಅಂದರೆ, ವರ್ಷ ವರ್ಷವೂ ನೀವು ವರ್ಷದ ರಜೆಯಲ್ಲಿ ವಿದೇಶ ಪ್ರವಾಸ ಹೋಗುತ್ತಿದ್ದಿರಾ?

**ಗುಂಡ:** ಪ್ರತೀ ವರ್ಷ ಹಣದ ಅಭಾವದ ಕಾರಣದಿಂದಾಗಿ ಪ್ರವಾಸವನ್ನು ರದ್ದು ಗೊಳಿಸಬೇಕಾಗುತ್ತಿತ್ತು!

***

ಪೊಲೀಸರನ್ನು ನೋಡಿ ಜನರು ತಮ್ಮ ಮಾಸ್ಕ್ ಸರಿಪಡಿಸಿಕೊಳ್ಳುವ ರೀತಿಯನ್ನು ಗಮನಿಸಿದಾಗ ಮೊದಲೆಲ್ಲ ಮಾವನವರನ್ನು ಕಂಡಾಗ ಸೊಸೆ ತನ್ನ ತಲೆ ಮೇಲಿನ ಸೆರಗಿನ ಮುಸುಕು ಸರಿಪಡಿಸಿ ಗೌರವ ಸೂಚಿಸುತ್ತಿದ್ದ ಹಿಂದಿ ಸಿನಿಮಾ ದೃಶ್ಯ ನೆನಪಾಗುತ್ತದೆ!

***

ಮೂರು ದಿನಕ್ಕಿಂತ ಹೆಚ್ಚು ಕಫ, ಜ್ವರವಿದ್ದರೆ ಕೊರೊನಾ ಆಗುತ್ತದೆ ಮತ್ತು ಸಮಯಾನುಸಾರ ಗರ್ಲ್ ಫ್ರೆಂಡ್ ಬದಲಿಸದಿದ್ದರೆ ಹೆಂಡತಿ ಆಗುತ್ತಾಳೆ!

***

ವಠಾರದೊಳಗೆ ಇಬ್ಬರು ಪುಟ್ಟ ಮಕ್ಕಳ ಸಂಭಾಷಣೆ: ಈ ಕೊರೊನಾ ವ್ಯಾಕ್ಸಿನ್ ಬರಲು ಇನ್ನು ನಾಲ್ಕು ತಿಂಗಳಾದರೂ ತಡವಾಗಬೇಕು. ಮುಂದಿನ ವರ್ಷ ಮಾರ್ಚ್ ತಿಂಗಳ ಅಂತಿಮ ಪರೀಕ್ಷೆಯ ನಂತರ ಬಂದರೆ ಸಾಕು!

***

**ಶ್ರೀಮತಿ ಗುಂಡ:** ರೀ, ಇವತ್ತು ಮಾರ್ಕೆಟಿಗೆ ಹೋದವರು ಬರುವಾಗ ನನಗೆ ಏಳು ಮಾಸ್ಕ್ ತನ್ನಿ...

**ಗುಂಡ:** ಏಳು ಯಾಕೆ? ಈಗಿರುವ ಎರಡು ಸಾಲದೆ?

**ಶ್ರೀಮತಿ ಗುಂಡ:** ಅದು ಹಳೆಯದಾಗಿದೆ ಕಣ್ರೀ, ನನಗೀಗ ವಾರದ ಏಳು ಸೀರೆಗಳಿಗೆ ಮ್ಯಾಚಿಂಗ್ ಆಗುವ ಏಳು ಬಣ್ಣಗಳ ಏಳು ಹೊಸ ಮಾಸ್ಕ್ ಗಳೇ ಬೇಕು ಕಣ್ರೀ!

**–ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ**

**ಗೆಳೆಯ:** ಲೋ ಗುಂಡ ಡಕಾಯಿತ ಸೂರಪ್ಪನನ್ನು ಹಿಡಿದುಕೊಟ್ಟವರಿಗೆ 2 ಲಕ್ಷ ರೂಪಾಯಿ ಬಹುಮಾನ ಕೊಡ್ತಾರಂತೆ. ಜಾಹೀರಾತು ಬಂದಿತ್ತು.

**ಗುಂಡ:** ಹೌದಾ? ಎಷ್ಟು ದಿನಗಳ ಹಿಂದೆ ಬಂದಿತ್ತು?

**ಗೆಳೆಯ:** ಎರಡು ತಿಂಗಳಾಯಿತು ಕಣೋ.

**ಗುಂಡ:** ಹಾಗಾದರೆ ಈಗ ಸುಮ್ಮನಿರು! ಇನ್ನೊಂದು ಆರು ತಿಂಗಳಾಗಲಿ. ಆಗ ಬಹುಮಾನದ ಮೊತ್ತ 5 ಲಕ್ಷಕ್ಕೆ ಏರಿಸಿರುತ್ತಾರೆ.

***

**ಲೇಖಕ:** ಸಾರ್ ನಾನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಲು 4 ಕಥೆಗಳನ್ನು ಕಳುಹಿಸಿದ್ದೇನೆ.

**ಸಂಪಾದಕ:** ಹೌದಾ? ವೆರಿ ಗುಡ್, ಕಥೆಗಳ ಹೆಸರುಗಳೇನು?

**ಲೇಖಕ:** 1. ಮರ್ಯಾದೆಯಿಂದ ಕೇಳ್ತೀನಿ 2. ಕಥೆಯನ್ನು ಪ್ರಕಟಿಸಿ 3. ನಿರಾಕರಿಸಿದರೆ ಪಿತ್ತ ನೆತ್ತಿಗೇರುತ್ತದೆ. 4 ಇಲ್ಲಿ ಒಂದು ಕೊಲೆ ನಡೆಯುತ್ತದೆ.

***

**ಟೀಚರ್:** ಲೋ ಗುಂಡ ನೀನು ಯಾಕೆ ಪದೇ ಪದೇ ಗೋಪಾಲನ ಮುಖ ನೋಡಿಕೊಂಡು ಓದುತ್ತಿದ್ದೀಯ?

**ಗುಂಡ:** ಏನಿಲ್ಲಾ ಟೀಚರ್! ನಮ್ಮ ತಾಯಿ ನನಗೆ ಅವನ ಮುಖ ನೋಡಿಕೊಂಡಾದರೂ ಚೆನ್ನಾಗಿ ಓದುವುದನ್ನು ಕಲಿ ಅಂತ ಹೇಳ್ತಾ ಇರ್ತಾರೆ ಅದಕ್ಕೆ.

***

**ನ್ಯಾಯಾದೀಶ:** ಏನಯ್ಯಾ ನೀನು ಮೂರು ಬಾರಿಯೂ ಬ್ಯಾಂಕಿನಲ್ಲೇ ದರೋಡೆ ಮಾಡಿದ್ದಿಯಲ್ಲ? ಅದಕ್ಕೆ ವಿಶೇಷ ಕಾರಣಗಳೇನಾದರೂ ಇದೆಯಾ?

**ಕಳ್ಳ:** ಹೌದು ಸಾಹೇಬರೇ! ಯಾಕೆಂದರೆ ಬ್ಯಾಂಕಿನಲ್ಲಿ ಸಿಗುವಷ್ಟು ಹಣ ಬೇರೆಲ್ಲೂ ಸಿಗುವುದು ಈಗ ಕಷ್ಟ.

***

**ಗೆಳೆಯ:** ಏನೋ ಗುಂಡ ಎಲ್ಲಾ ಬಿಟ್ಟು ಆಮೆಯ ಮೇಲೆ ಕುಳಿತುಕೊಂಡು ಹೊರಟಿದ್ದೀಯಾ ಯಾಕೆ?

**ಗುಂಡ:** ನನ್ನ ತಂದೆ ನಿನಗೆ ಎಲ್ಲದಕ್ಕೂ ತುಂಬಾ ಅವಸರ! ನಿಧಾನವಾಗಿ ಹೋಗು ಅಂತ ಹೇಳ್ತಾ ಇರ್ತಾರೆ ಅದಕ್ಕೆ.

***

**ಗುಂಡ:** ಸಾರ್ ನೀವು ನಿಮ್ಮ ಭಾಷಣದಲ್ಲಿ ಮಾತಿಗೊಮ್ಮೆ ನನಗೆ ಎಲ್ಲಾ ಗೊತ್ತು ಅಂತ ಹೇಳ್ತಾನೇ ಇರ್ತೀರಾ! ಹಾಗಾದರೆ ಕತ್ತೆಯ ತಲೆಯಲ್ಲಿ ಎಷ್ಟು ಕೂದಲುಗಳಿವೆ ಎಂಬುದನ್ನು ಹೇಳಿ ನೋಡೋಣ?

**ಭಾಷಣಕಾರ:** ಮಹನೀಯರೇ ಇಷ್ಟೊಂದು ಜನರ ಮಧ್ಯೆ ನನಗೆ ನಿಮ್ಮ ತಲೆ ಕಾಣುತ್ತಿಲ್ಲವಲ್ಲ ಹೇಗೆ ಹೇಳಲಿ?

***

**ಗೆಳೆಯ:** ಏನೋ ಗುಂಡ ನೀನು ಒಂದೇ ಏಟಿಗೆ ನಿನ್ನ ಪಕ್ಕದ ಮನೆಯ ಹುಡುಗಿಯನ್ನು ಲವ್ ಮಾಡುವುದನ್ನು ಬಿಟ್ಟುಬಿಟ್ಟೆಯಂತೆ ಹೌದಾ?

**ಗುಂಡ:** ಹೌದುಕಣಯ್ಯ! ಆ ಒಂದೇ ಒಂದು ಏಟು ಅವಳ ಅಣ್ಣನದು ಅದಕ್ಕೆ.

***

**ಗುಂಡ:** ಲೇ ನೀನೆಷ್ಟು ಸುಂದರವಾಗಿ ಕಾಣುತ್ತಿದ್ದೀಯೆಂದರೆ ಅದನ್ನು ವರ್ಣಿಸಲು ನನಗೆ ಪದಗಳೇ ಸಿಗುತ್ತಿಲ್ಲ.

**ಆಕೆ:** ತಗೋ ಈ ಶಬ್ದಕೋಶದ ಪುಸ್ತಕ.

***

**ಯಜಮಾನ:** ಏನ್ರಯ್ಯಾ ನಿನ್ನೆ ರಾತ್ರಿ ನೀವೆಲ್ಲರೂ ಸಿಕ್ಕಾಪಟ್ಟೆ ಕುಡಿದು ಕಸ ತುಂಬಿದ್ದ ಟೆಂಪೋವನ್ನು ಎಳೆದುಕೊಂಡು ಹೋಗುತ್ತಿದ್ದರಂತೆ.ಹೌದಾ?

**ಕೆಲಸಗಾರರು:** ಹೌದು ಸಾರ್.

**ಯಜಮಾನ:** ಆಗ ನಾನೆಲ್ಲಿದ್ದೆ?

**ಕೆಲಸಗಾರರು:** ಕಸ ತುಂಬಿದ್ದ ಆ ಟೆಂಪೋದಲ್ಲಿ.

(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು